ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 632/2021

ಪಿ. ಡಬ್ಲ್ಯು: 01
ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿಂಗ್ರಿನಾಯಕ |
| ತಂದೆ/ಪತಿಯ ಹೆಸರು | ಃ | ನರಸಿಂಹ ನಾಯಕ |
| ವಯಸ್ಸು | ಃ | 44 ವರ್ಷ |
| ವೃತ್ತಿ | ಃ | ಪೋಲೀಸ್ ಮುಖ್ಯ ಪೇದೆ, ಪಾಂಡವಪುರ ಪೋಲೀಸ್ ಠಾಣೆ |
| ವಾಸ | ಃ | ಅರಕೆರೆ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 16.11.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2017 ರಿಂದ 2022 ವರೆಗೆ ಅರಕರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 30.03.2021 ರಂದು ಸಮಯ ರಾತ್ರಿ 08.50 ರಲ್ಲಿ ನಾನು, ನಮ್ಮ ಠಾಣೆಯ ಪಿ.ಎಸ್.ಐ, ಜೀಪ್ ಚಾಲಕರಾದ ಸಿದ್ದರಾಮನಾಯಕ ರವರು ನಮ್ಮ ಇಲಾಖಾ ಜೀಪ್ ನಲ್ಲಿ ಅರಕೆರೆ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ಪಿ.ಎಸ್.ಐ ರವರು ನಮಗೆ ಮಂಡ್ಯ ಕೊಪ್ಪಲು ಗ್ರಾಮದ ಸಣ್ಣಬೋರ ರವರ ಚಿಲ್ಲರೆ ಅಂಗಡಿ ಹತ್ತಿರ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಇಟ್ಟಿರುವ ಬಗ್ಗೆ ತಿಳಿಸಿದ್ದು ನಾವು ನಂತರ ಠಾಣೆಗೆ ವಾಪಸ್ಸು ಹೋಗಿದ್ದು ಪಿ.ಎಸ್.ಐ ರವರ ಠಾಣಾಧಿಕಾರಿಯವರಿಗೆ ದೂರು ನೀಡಿ ಕೇಸು ದಾಖಲಿಸಿದ ನಂತರ ರಾತ್ರಿ 09.40 ಸಮಯಕ್ಕೆ ಅಲ್ಲಿಯೇ ಇದ್ದ ಶ್ರೀಧರ್ ಮತ್ತು ಸುರೇಶ್ ರವರನ್ನು ಇಲಾಖಾ ಜೀಪ್ ನಲ್ಲಿ ಕೂರಿಸಿಕೊಂಡು ಮಂಡ್ಯ ಕೊಪ್ಪಲು ಗ್ರಾಮದ ಸಣ್ಣಬೋರ ರವರ ಚಿಲ್ಲರೆ ಅಂಗಡಿ ಬಳಿ ಹೋಗಿ ಪರಿಶೀಲನೆ ಮಾಡಿದಾಗ ಅಲ್ಲಿ ಒಂದು ಬಿಳಿಯ ಬಟ್ಟೆಯ ಬ್ಯಾಗ್ ಇದ್ದು ಅದನ್ನು ಯಾರದು ಎಂದು ಕೇಳಿದಾಗ ಆರೋಪಿ ಸಣ್ಣಬೋರ ರವರು ನನ್ನದೇ ಎಂದು ತಿಳಿಸಿದ ಕಾರಣ ಸದರಿ ಬ್ಯಾಗ್ ಅನ್ನು ಪರಿಶೀಲಿಸಿದಾಗ ಅದರಲ್ಲಿ 180ml ಅಳತೆಯ old admiral brandy ಕಂಪನಿಯ ಮದ್ಯ ತುಂಬಿದ 10 ಪ್ಯಾಕೆಟ್ ಗಳು ಇದ್ದವು ಅವುಗಳ ಮೇಲೆ ರೂ.86.75 ಪೈಸೆ ಎಂದು ನಮೂದಾಗಿತ್ತು. ಅದರ ಜೊತೆ 180 ಎಂ.ಎಲ್ ಅಳತೆಯ Bag piper whisky ಕಂಪನಿಯ 5

ಮದ್ಯ ತುಂಬಿದ ಪಾಕ್ಯೆಟೆಗಳು ಇದ್ದವು ಅವುಗಳ ಮೇಲೆ ಬೆಲೆ ರೂ.106.23 ಪೈಸೆ ಎಂದು ನಮೂದಾಗಿತ್ತು.

ಸದರಿ ಮದ್ಯ ತುಂಬಿದ್ದ ಪ್ಯಾಕೆಟ್ ಗಳನ್ನು ಮಾರಾಟ ಮಾಡಲು ಪರವಾನಿಗೆ ಹೊಂದಿರುವ ಬಗ್ಗೆ ಸಣ್ಣಬೋರನನ್ನು ವಿಚಾರಿಸಿದಾಗ ಆತ ತನ್ನ ಹತ್ತಿರ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿದನು. ನಂತರ ಪಂಚರ ಸಮಕ್ಷಮ ಪ್ರತಿಯೊಂದು ಪ್ಯಾಕೆಟ್ ಅನ್ನು ಬಿಳಿಯ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅದರ ಮೇಲೆ ಅಂಟಿಸಿದರು. ನಂತರ ರಾತ್ರಿ 09.50-10.50 ವರೆಗೆ ಸ್ಥಳ ಪಂಚನಾಮೆ ಜರುಗಿಸಲಾಗಿದೆ. ನಂತರ ಆರೋಪಿ ಹಾಗೂ ಮು.ಮಾಲುಗಳನ್ನು ಪಿ.ಎಸ್.ಐ ರವರು ಠಾಣೆಗೆ ತಂದು ಠಾಣಾಧಿಕಾರಿಯವರಿಗೆ ಹಾಜರುಪಡಿಸಿದ್ದಾರೆ.

ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆತನ ಗುರುತಿಸುವಿಕೆ ಬಗ್ಗೆ ತಮ್ಮ ತಕರಾರು ಇಲ್ಲವೆಂದು ನುಡಿದಿರುತ್ತಾರೆ. ಘಟನೆ ಸಂಬಂಧ ನಾನು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿದ್ದೇನೆ. ಘಟನಾ ದಿನ ಅರೋಪಿಯಿಂದ ವಶಪಡಿಸಿಕೊಂಡಿದ್ದ ಮು.ಮಾಲು.ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಒಂದು ಬಿಳಿಯ ಬಟ್ಟೆ ಬ್ಯಾಗ್, Bag piper whisky ಕಂಪನಿಯ 5 ಮದ್ಯದ ಪೌಚ್ ಗಳು ಹಾಗೂ 10 Old Admiral Brandy ಪೌಚ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾಲು.1 ರಿಂದ 3 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎ.ಪಿ.ಎಸ್. ವಕೀಲರಿಂದ**

ನಾನು ಅರಕೆರೆ ಪೋಲೀಸ್ ಠಾಣೆಯಲ್ಲಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದೇನೆ. ನನಗೆ ಅರಕೆರೆ ಗ್ರಾಮದಲ್ಲಿ ಹಲವಾರು ಪರಿಚಯಸ್ಥರು ಇದ್ದಾರೆ ಎಂದರೆ ಸರಿ. ದಾಳಿಗೆ ಹೋಗುವಾಗ ನಾವು 5 ಜನ ಹೋಗಿರುತ್ತೇವೆ. ಆರೋಪಿಗೆ ಸೇರಿದ ಅಂಗಡಿ ಚಿಲ್ಲರೆ ಅಂಗಡಿಯಾಗಿತ್ತು. ಮಂಡ್ಯ ಕೊಪ್ಪಲು ಗ್ರಾಮದಿಂದ ಸುಮಾರು 1 ಕಿ.ಮಿ ದೂರದಲ್ಲಿ ಆರೋಪಿಗೆ ಸೇರಿದ ಅಂಗಡಿ ಇರುತ್ತದೆ. ಆರೋಪಿಯ ಅಂಗಡಿಯ ಸುತ್ತಮುತ್ತ ಯಾವುದೇ ವಾಸದ ಅಂಗಡಿಗಳು ಇಲ್ಲವೆಂದರೆ ಸರಿ. ಆರೋಪಿಯ ಅಂಗಡಿಯ ಉತ್ತರ ದಿಕ್ಕಿನಲ್ಲಿ ಶ್ರೀರಂಗಪಟ್ಟಣ ಬನ್ನೂರು ಮುಖ್ಯ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಮಧ್ಯರಾತ್ರಿಯಾದರೂ ಕೂಡ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ. ಆರೋಪಿಯು ತನ್ನ ಅಂಗಡಿಯಲ್ಲಿ ಟೀ ವ್ಯಾಪಾರ ಸಹ ಮಾಡುತ್ತಾನೆ ಎಂದರೆ ಸರಿ. ಹಲವಾರು ಸಾರ್ವಜನಿಕರು ಆರೋಪಿಯ ಅಂಗಡಿಯಲ್ಲಿ ಟೀ ಕುಡಿಯಲು ಹೋಗುತ್ತಾರೆ ಎಂದರೆ ಸರಿ.

ಪಂಚರು ನನ್ನ ಪರಿಚಯಸ್ತರು ಎಂದರೆ ಸರಿ. ಪಂಚರನ್ನು ನಾವೇ ಉದ್ದೇಶಪೂರ್ವಕವಾಗಿ ಸ್ಥಳಕ್ಕೆ ಕರೆಯಿಸಿಕೊಂಡಿದ್ದೇವು ಎಂದರೆ ಸುಳ್ಳು. ಸ್ಥಳ ಮಹಜರ್ ಅನ್ನು ಸಿಪಿಸಿ 551 ದಿನೇಶ್ ಎಂಬುವವರು ಬರೆದಿದ್ದಾರೆ.

ನಾವು ವಶಪಡಿಸಿಕೊಂಡ ಮು.ಮಾಲು ಚೀಲ ಆರೋಪಿಯ ಅಂಗಡಿ ಹೊರಗೆ ಇತ್ತು ಎಂದರೆ ಸಾಕ್ಷಿಯು ಅದು ಆರೋಪಿ ಅಂಗಡಿಗೆ ಹೊಂದಿಕೊಂಡಂತೆ ಇತ್ತು ಎಂದು ನುಡಿಯುತ್ತಾರೆ. ಆರೋಪಿ ತನ್ನ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸುಳ್ಳು.

ಮಹಜರ್ ಅನ್ನು ರಾತ್ರಿ 09.50-10.50 ವರೆಗೆ ಇಲಾಖಾ ಜೀಪ್ ಲೈಟ್ ಬೆಳಕು ಹಾಗೂ ಟಾರ್ಚ್ ಸಹಾಯದಿಂದ ಬರೆಯಲಾಗಿದೆ. ನಮ್ಮ ಜೀಪ್ ಚಾಲಕ ಸಿದ್ದರಾಮನಾಯಕ. ನಾವು ಸ್ಥಳಕ್ಕೆ ಒಟ್ಟು 5 ಜನ ಜೀಪ್ ನಲ್ಲಿ ಹೋದೆವು ಎಂದರೆ ಸರಿ. ನಾವು ಸ್ಥಳಕ್ಕೆ ಹೋದ ನಂತರ ಮಹಜರ್ ಬರೆಯಲು ದಿನೇಶ್ ರವರನ್ನು ಕರೆಯಿಸಿಕೊಂಡಿದ್ದೇವೆ.

ಆರೋಪಿ ತನ್ನ ಅಂಗಡಿಯಲ್ಲಿ ಕೇವಲ ಟೀ ವ್ಯಾಪಾರ ಮಾಡುತ್ತಾನೆ ನಾವು ಹೇಳಿದಂತೆ ಮದ್ಯ ವ್ಯಾಪಾರ ಮಾಡುವುದಿಲ್ಲ ಆದರೂ ಕೂಡ ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣವನ್ನು ಆರೋಪಿತನ ವಿರುದ್ದ ನಮ್ಮ ಪಿ.ಎಸ್.ಐ. ರವರು ದಾಖಲಿಸಿದ್ದಾರೆ ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ತನ್ನ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.